ಪ್ರದೇಶಗಳಲ್ಲಿ ಬೆಳೆಗಳ ಇಳುವರಿಯು ಮಳೆಯ ಭಾವದಿಂದ ಏರುಪೇರು ಆಗುತ್ತಿದ್ದುದರಿಂದ ಬೀಜೋತ್ಪಾದನಾ ಕಾರ್ಯಕ್ರಮಕ್ಕೆ ಬದಲಾಗಿ ಜೈವಿಕ ಇಂಧನ ಬೆಳೆಯಾದ ಜತ್ರೋಪ ಗಿಡಗಳನ್ನು ಬೆಳೆಸಲಾಗಿದೆ. ಇತ್ತೀಚೆಗೆ ಇಂಧನದ ಕೊರತೆಯು ಕ್ರಮೇಣ ಹೆಚ್ಚಾಗಿರುವುದರಿಂದ ಪರ್ಯಾಯ ಇಂಧನದ ಮೂಲಗಳನ್ನು ಸಮರ್ಪಕವಾಗಿ ಬಳಕೆ ಮಾಡಬೇಕೆಂಬ ಹಿನ್ನಲೆಯಲ್ಲಿ ಖುಷ್ಕಿ ಪ್ರದೇಶಗಳಲ್ಲಿ ಜತ್ರೋಪ ಗಿಡಗಳನ್ನು ಬೆಳೆಸಲಾಗಿದೆ.

ಇ) ಜತ್ರೋಪ ಗಿಡಗಳನ್ನು ಬೆಳೆದಿರುವ ಖುಷ್ಕಿ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಒಂದು ಕಾರ್ಯಕ್ರಮವನ್ನು ರೂಪಿಸಿ ಆ ಪ್ರದೇಶದಲ್ಲಿ ಬೀಜೋತ್ಪಾದನಾ ಕಾರ್ಯಕ್ರಮವನ್ನು ಪುನರ್ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ನಂತರ ಜತ್ರೋಪ ಗಿಡಗಳನ್ನು ಹಂತ ಹಂತವಾಗಿ ತೆಗೆಸಿ ಒಟ್ಟಾರೆ ವಿಸ್ತೀರ್ಣವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುವುದು.

ಈ) ತುಮಕೂರು ಜಿಲ್ಲೆಯ ಶಿರಾ ತಾಃ ಚಿಕ್ಕನಹಳ್ಳಿಯಲ್ಲಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಕೃಷಿ ಡಿಪ್ಲೋಮಾ ಕೋರ್ಸ್ ತೆರೆಯುವ ಪ್ರಸ್ತಾವನೆ ಸದ್ಯಕ್ಕೆ ಇಲ್ಲ.

ರೈತರ ತರಬೇತಿ ಕೇಂದ್ರ

989 (1106) ಶ್ರೀ ಜಯಚಂದ್ರ ಟಿ.ಬಿ. (ಶಿರಾ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕು ಚಿಕ್ಕನಹಳ್ಳಿಯ ಶ್ರೀ. ಉಗ್ರೇಗೌಡರ ಸ್ಮಾರಕ ರೈತರ ತರಬೇತಿ ಕೇಂದ್ರದಲ್ಲಿ ಅತಿಥಿ ಉಪನ್ಯಾಸಕರಿಗೆ ಕೇವಲ ರೂ.200/- ಗಳ ಗೌರವ ಧನ ನೀಡುತ್ತಿದ್ದು, ಗೌರವ ಧನ ಹೆಚ್ಚಿಸಿ, ನುರಿತ ವಿಷಯ ತಜ್ಞರಿಂದ, ಹೊಸ ತಂತ್ರಜ್ಞಾನದೊಂದಿಗೆ ಪ್ರಾಯೋಗಿಕ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗುವುದೇ?

ಆ) ಈ ತರಬೇತಿಗೆ ಬರುವ ರೈತರನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಆಕರ್ಷಿಸಲು, ಮೂಲಭೂತ ಸೌಕರ್ಯ ಒದಗಿಸಲು, ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗಿರುವ ಕಾರಣ, ದಿನಭತ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ?

ಇ) ಹಿಂದಿನಂತೆಯೇ ರೈತರನ್ನು ಈ ತರಬೇತಿ ಕೇಂದ್ರಕ್ಕೆ ಕರೆತರಲು ಹಾಗೂ ಪ್ರಗತಿ ಪರ ರೈತರ ತಾಲ್ಲೂಕುಗಳಿಗೆ ಮತ್ತು ವಿವಿಧ ಕೃಷಿ ಕ್ಷೇತ್ರಗಳಿಗೆ

ಅಧ್ಯಯನ ಪ್ರವಾಸ ಕೈಗೊಳ್ಳಲು ಮತ್ತು ಈ ತರಬೇತಿ ಕೇಂದ್ರಕ್ಕೆ ಒಂದು ಹೊಸ ವಾಹನವನ್ನು ಒದಗಿಸಲು ಕ್ರಮಕೈಗೊಳ್ಳಲಾಗುವುದೇ?

ಶ್ರೀ ಎಸ್. ಎ. ರವೀಂದ್ರ ನಾಥ್ (ಕೃಷಿ ಸಚಿವರು) :

ಅ)

- ಕ್ರಮಕೈಗೊಳ್ಳಲಾಗಿದೆ.
- 2010–11ನೇ ಸಾಲಿನಿಂದ ಅತಿಥಿ ಉಪನ್ಯಾಸಕರಿಗೆ ನೀಡುವ ಗೌರವ ಧನವನ್ನು ಹೆಚ್ಚಿಸಿದ್ದು, ಏಪ್ರಿಲ್ 1, 2010 ರಿಂದ ಜಾರಿ ಗೊಳಿಸಲಾಗುವುದು.

ಆ)

- ಕ್ರಮಕೈಗೊಳ್ಳಲಾಗಿದೆ.
- 2008–09ನೇ ಸಾಲಿನಲ್ಲಿ ಸದರಿ ತರಬೇತಿ ಕೇಂದ್ರದ ಮೂಲಭೂತ ಸೌಕರ್ಯಗಳನ್ನು ಸಮಗ್ರವಾಗಿ ಅಭಿವೃದ್ಧಿ ಗೊಳಿಸಲಾಗಿದೆ.
- ದಿನಭತ್ಯೆ ಹೆಚ್ಚಳವನ್ನು ಏಪ್ರಿಲ್ 1, 2010 ರಿಂದ ಜಾರಿಗೊಳಿಸಲಾಗುವುದು.

ಇ)

- ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ತರಬೇತಿಗೆ ಆಗಮಿಸುವ ರೈತರು/ರೈತ ಮಹಿಳೆಯರಿಗೆ ತಮ್ಮ ಊರು ಗಳಿಂದ ತರಬೇತಿ ಕೇಂದ್ರಕ್ಕೆ ಬರುವ ಮತ್ತು ಹೋಗುವ ವಾಸ್ತವಿಕ ಪ್ರಯಾಣ ವೆಚ್ಚವನ್ನು ನೀಡಲಾಗುತ್ತಿದೆ.
- ತರಬೇತಿ ಸಮಯದಲ್ಲಿ ವಿವಿಧ ಕೃಷಿ ಕ್ಷೇತ್ರಗಳಿಗೆ ಅಧ್ಯಯನ ಪ್ರವಾಸ ಕೈಗೊಳ್ಳಲು ಬಾಡಿಗೆ ಆಧಾರದ ಮೇಲೆ ವಾಹನ ಸೌಲಭ್ಯ ಪಡೆಯಲು ಈಗಾಗಲೇ ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ, ತರಬೇತಿ ಕೇಂದ್ರಕ್ಕೆ ಹೊಸ ವಾಹನವನ್ನು ಖರೀದಿಸಿ ಒದಗಿಸುವ ಪ್ರಸ್ತಾಪವಿರುವುದಿಲ್ಲ.